# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಡಾ\|\| ಎಂ.ಜಿ. ಮುಳೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 686(756) |
| ಉತ್ತರಿಸುವ ದಿನಾಂಕ | 10.03.2026 |
| ಉತ್ತರಿಸುವ ಸಚಿವರು | ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಬೀದರ್ ಜಿಲ್ಲೆಯ ನಗರ ಮತ್ತು ಗ್ರಾಮೀಣ ವ್ಯಾಪ್ತಿಯಲ್ಲಿ ಪತ್ತೆಯಾದ ಅನಧಿಕೃತ ಬಡಾವಣೆಗಳ (Illegal Layout) ಸಂಖ್ಯೆ ಎಷ್ಟು: (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | ಕಳೆದ ಎರಡು ವರ್ಷಗಳಲ್ಲಿ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಒಟ್ಟು 08 ಅನಧಿಕೃತ ಬಡಾವಣೆಗಳು ಕಂಡು ಬಂದಿದ್ದು, ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |
| ಆ) | ನಗರ ಹಾಗೂ ಗ್ರಾಮಾಂತರ ಯೋಜನಾ ಕಾಯ್ದೆ (KTCP Act) ಅಡಿಯಲ್ಲಿ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ ಮತ್ತು ಎಷ್ಟು ಅನಧಿಕೃತ ನಿರ್ಮಾಣಗಳನ್ನು ನೆಲಸಮಗೊಳಿಸಲಾಗಿದೆ: | ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಒಟ್ಟು 08 ಅನಧಿಕೃತ ಬಡಾವಣೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದು, ಸದರಿ ಅನಧಿಕೃತ ವಿನ್ಯಾಸ/ಬಡಾವಣೆ ರಚಿಸಿದ ಭೂ ಮಾಲೀಕರಿಗೆ ನೋಟೀಸು ಜಾರಿ ಮಾಡಲಾಗಿದೆ.<br><br>ಮುಂದುವರೆದು, ಸದರಿ ವಿನ್ಯಾಸ / ಬಡಾವಣೆಗಳಿಗೆ ಸಂಬಂಧಿಸಿದಂತೆ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಿಂದ ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.<br><br>• ಅನಧಿಕೃತ ವಿನ್ಯಾಸಗಳಲ್ಲಿನ ನಿವೇಶನಗಳನ್ನು ನೋಂದಣಿ ಮಾಡದಂತೆ ಉಪನೋಂದಣಾಧಿಕಾರಿಗಳು ಬೀದರ್ ರವರಿಗೆ ಪತ್ರ ಬರೆಯಲಾಗಿದೆ.<br>• ಅನಧಿಕೃತ ವಿನ್ಯಾಸಗಳಲ್ಲಿನ ನಿವೇಶನಗಳ ಆಸ್ತಿ ವರ್ಗಾವಣೆ ಮಾಡಬಾರದೆಂದು ಸ್ಥಳೀಯ ಸಂಸ್ಥೆಗಳಾದ ಆಯುಕ್ತರು, ಮಹಾನಗರ ಪಾಲಿಕೆ ಬೀದರ್ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ್ ಕಾರ್ಯಾಲಯ ಚಿಟ್ಟಾ |

| | | |
|---|---|---|
| | | ರವರಿಗೆ ಪತ್ರದ ಮುಖಾಂತರ ತಿಳಿಸಲಾಗಿದೆ.<br>• ಅನಧಿಕೃತ ವಿನ್ಯಾಸಗಳು / ಬಡಾವಣೆಗಳು ನಿರ್ಮಾಣವಾಗದಂತೆ ಕ್ರಮವಹಿಸಲು ಸ್ಥಳೀಯ ಸಂಸ್ಥೆಗಳಿಗೆ ಪತ್ರದ ಮೂಲಕ ತಿಳಿಸಲಾಗಿರುತ್ತದೆ. |
| ಇ) | ಮೂಲ ಸೌಕರ್ಯಗಳಿಲ್ಲದ ಅಕ್ರಮ ಲೇಔಟ್ ಗಳಿಂದಾಗಿ ಸಾರ್ವಜನಿಕರು ಅನುಭವಿಸುತ್ತಿರುವ ವಂಚನೆ ಮತ್ತು ಇದರಿಂದ ಸರ್ಕಾರಕ್ಕೆ ಉಂಟಾಗಿರುವ ಸ್ಟ್ಯಾಂಪ್ ಡ್ಯೂಟಿ ನಷ್ಟದ ಅಂದಾಜು ಮೊತ್ತ ಎಷ್ಟು: | ಮುದ್ರಾಂಕ ಶುಲ್ಕ ಸಂಬಂಧಿಸಿದ ನಿವೇಶನ ದರದಲ್ಲೆ ಮುದ್ರಾಂಕ ಶುಲ್ಕ ನಿಗದಿಯಾಗುವುದರಿಂದ ಅಕ್ರಮ ಲೇಔಟ್ ಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಯಾವುದೇ ರೀತಿಯ ರಾಜಸ್ವ ನಷ್ಟವುಂಟಾಗುವ ಅವಕಾಶ ಉದ್ಭವಿಸುವುದಿಲ್ಲ. |
| ಈ) | ರೇರಾ (RERA) ನಿಯಮಗಳನ್ನು ಗಾಳಿಗೆ ತೂರಿ ಲೇಔಟ್ ನಿರ್ಮಿಸಿದ ಡೆವಲಪರ್ ಗಳ ಮೇಲೆ ವಿಧಿಸಿದ ದಂಡದ ಮೊತ್ತವೆಷ್ಟು ಮತ್ತು ಎಷ್ಟು ಸಂಸ್ಥೆಗಳ ಪರವಾನಗಿಯನ್ನು ರದ್ದುಪಡಿಸಲಾಗಿದೆ: | ಯಾವುದೇ ದಂಡ ವಿಧಿಸಿರುವುದಿಲ್ಲ ಹಾಗೂ ರೇರಾ ನೋಂದಣಿ ಮಾಡದ ವಿನ್ಯಾಸದ ಮಾಲೀಕರಿಗೆ ನೋಟೀಸ್ ಜಾರಿ ಮಾಡಲಾಗಿರುತ್ತದೆ. |
| ಉ) | ಇಂಜಿನಿಯರ್ ಗಳ ದಿನಾಚರಣೆಯ ಸಂದರ್ಭದಲ್ಲಿ ಚರ್ಚೆಯಾದಂತೆ, ಗ್ರಾಮೀಣ ಭಾಗದ ವ್ಯವಸ್ಥಿತ ಅಭಿವೃದ್ಧಿಗಾಗಿ ಇಂಜಿನಿಯರ್ ಗಳ ತಾಂತ್ರಿಕ ಸಲಹೆಯನ್ನು ಪಡೆದು ಅಕ್ರಮ ಲೇಔಟ್ ತಡೆಯಲು ಸರ್ಕಾರವು; ಜಿಐಎಸ್ ಮ್ಯಾಪಿಂಗ್' (GIS Mapping) ಅಥವಾ ಕಟ್ಟುನಿಟ್ಟಿನ ಆನ್ ಲೈನ್ ಮೇಲ್ವಿಚಾರಣಾ ವ್ಯವಸ್ಥೆಯನ್ನು ಜಾರಿಗೆ ತರುತ್ತಿದೆಯೇ? | ಭೂ ಅಭಿವೃದ್ಧಿ ಮತ್ತು ಕಟ್ಟಡ ನಕ್ಷೆ ಅನುಮೋದನೆ ಪ್ರಕ್ರಿಯೆಗಳನ್ನು ಪಾರದರ್ಶಕ ಹಾಗೂ ಜನಸ್ನೇಹಿಗೊಳಿಸಲು ಇ-ಆಡಳಿತ ಸಂಸ್ಥೆ ವತಿಯಿಂದ ಜಿಐಎಸ್ ವ್ಯವಸ್ಥೆಯನ್ನೊಳಗೊಂಡ ULMS(Unified Land Management System) ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಸದರಿ ತಂತ್ರಾಂಶವನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.. |

ಸಂಖ್ಯೆ : ನಅಇ 61 ಗುಅಪ್ರಾ 2026

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು

## ಅನುಬಂಧ

## ಬೀದರ್ ನಗರಾಭಿವೃದ್ಧಿ ಪ್ರಾಧಿಕಾರ

| ಕ್ರ. ಸಂ. | ಭೂ ಮಾಲೀಕರ ಹೆಸರು | ಜಿಲ್ಲೆ/ ತಾಲ್ಲೂಕು | ಹೋಬಳಿ | ಗ್ರಾಮ | ಸರ್ವೆ ನಂಬರ್ | ವಿಸ್ತೀರ್ಣ (ಎಕರೆ-ಗುಂಟೆ) |
|---|---|---|---|---|---|---|
| 1. | ಶ್ರೀಮತಿ ಶೋಭಾ ದುಗಾಣಿ ಮತ್ತು ಇತರರು | ಬೀದರ/ಬೀದರ | ಬೀದರ (ದಕ್ಷಿಣ) | ಬಾಗೆ ಖರೀದಿ | 2/3 | 01-16 |
| 2. | ಶ್ರೀ ಸೈಯದ್ ದಾವೂದಮಿಯ್ಯಾ | ಬೀದರ/ಬೀದರ | ಬೀದರ (ದಕ್ಷಿಣ) | ಹಳ್ಳದಕೇರಿ (ಕೆ) | 83/43 | 03-05 |
| 3. | ಶ್ರೀ ಎಂ.ಡಿ.ಅನ್ವರ ತಂದೆ ಎಂ.ಡಿ ಅಬೀದಮಿಯ್ಯಾ | ಬೀದರ/ಬೀದರ | ಬೀದರ (ದಕ್ಷಿಣ) | ಮೈಲೂರು | 31/5 | 01-20 |
| 4. | ಶ್ರೀ ಗಣಪತಿ ತಂದೆ ಮಾರುತಿ | ಬೀದರ/ಬೀದರ | ಕಮಠಾಣಾ | ಚಿದ್ರಿ | 15/1 | 04-31 |
| 5. | ಶ್ರೀಮತಿ ಶಕುಂತಲಾ ಗಂಡ ರಘುನಾಥ ಮತ್ತು ಇತರರು | ಬೀದರ/ಬೀದರ | ಕಮಠಾಣಾ | ಚಿದ್ರಿ | 222/5 | 02-03 |
| 6. | ಶ್ರೀ ಜಗನ್ನಾಥ ತಂದೆ ಮಡೆಪ್ಪಾ | ಬೀದರ/ಬೀದರ | ಕಮಠಾಣಾ | ಚಿದ್ರಿ | 15/*3/ಬಿ | 02-35 |
| 7. | ಶ್ರೀ ವಿಜಯಕುಮಾರ ಪಾಟೀಲ್ ತಂದೆ ಸಂಗಶೆಟ್ಟಿ ಪಾಟೀಲ | ಬೀದರ/ಬೀದರ | ಬೀದರ (ದಕ್ಷಿಣ) | ಚಿದ್ರಿ | 19/*/2 | 02-00 |
| 8. | ಶ್ರೀಮತಿ ಸುಗಲಾಬಾಯಿ ಗಂಡ ಶರಣಪ್ಪಾ | ಬೀದರ/ಬೀದರ | ಬೀದರ (ಉತ್ತರ) | ಚಿದ್ರಿ | 105/*/2 | 02-06 |

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ.